**ಸಾಕ್ಷಿಯನ್ನು ದಿನಾಂಕಃ 27-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿಗಳ ಶ್ರೀ. ಎನ್.ಎನ್.ವಕೀಲರವರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗ ಒದಿದ್ದೇನೆ.ವಾದಿಯರು ಹಾಗೂ ಪ್ರತಿವಾದಿಗಳು ಕುಟುಂಬದ ಅಸ್ತಿಗಳು ಭಾಗ ಮಾಡಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ. 1ನೇ ವಾದಿಯ ತಂದೆಯಾದ ಖಾಸಿಂ ಇವರಿಗೆ ಒಟ್ಟು ಎಷ್ಟು ಜನ ಮಕ್ಕಳು ಇರುವರು ಎಂದು ನನಗೆ ಮಾಹಿತಿ ಇಲ್ಲ ಅಂದರೆ ಸರಿ. ದವಾ ಅಸ್ತಿಯ ಸರ್ವೆ ನಂ 135 ಇದು ಅದರ ವಿಸ್ತಿರ್ಣ 6 ಎಕರೆ 50 ಸೆಂಟ್ಸ ಇರುವುದು. 60 ವರ್ಷಗಳಿಂದ ವಾದಿಯರು ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದರು ಎಂದು ನನ್ನ ತಂದೆ ನನಗೆ ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ನನಗೆ ಅದರ ಬಗ್ಗೆ ವೈಯಕ್ತಿಕ ಮಾಹಿತಿ ಇದೆ ಅಂದರೆ ಇತ್ತೀಚ್ಚಿಗೆ ಗೊತ್ತಿರುತ್ತದೆ. ನಮ್ಮ ಜಮೀನನ್ನು ನಾನು ಮತ್ತು ನನ್ನ ಸಹೋದರರು ಜಂಟಿಯಾಗಿ ಸಾಗುವಳಿ ಮಾಡುತ್ತೇವೆ. ಉತ್ತರ ದಿಕ್ಕಿಗೆ ಇದೆ ಎಂದು ಹೇಳಲಾದ ಜಮೀನು ನನ್ನ ತಾಯಿಯ ಹೆಸರಿಗೆ ಇರುವುದು. ಅವರು ಜೀವಂತ ಇರುವರು. ದಾವಾ ಅಸ್ತಿಯ ಪೈಕಿ 1 ಎಕರೆ 70 ಸೆಂಟ್ಸ ಮೌಖಿಕ ಪಾಲು ವಿಭಾಗದಲ್ಲಿ ಪ್ರತಿವಾದಿಯರ ತಂದೆಗೆ ಹೋಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ದಾವಾ ಅಸ್ತ ಮತ್ತು ಇತರೆ ಕುಟುಂಬದ ಅಸ್ತಿಗಳನ್ನು ವಾದಿಯರು ಮೌಖಿಕ ಪಾಲು ವಿಭಾಗ ಮಾಡಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ಮತ್ತು 2ನೇ ವಾದಿಯರು ತಲಾ 70 ಸೆಂಟ್ಸ ನಂತರ ಸ್ವಾಧೀನ ಅನುಭವದಲ್ಲಿ ಇರುವರು ಅಂದರೆ ನನಗೆ ಮಾಹಿತಿ ಇಲ್ಲ. ವಾದಿಯರು ದಾವಾ ಸ್ವತ್ತಿನ ಸಂಪೂರ್ಣ ವಿಸ್ತಿರ್ಣಳದಲ್ಲ್ ಸ್ವಾಧೀನದಲ್ಲಿ ಇರದಿದ್ದರೂ ಕೂಡ ಅವರೇ ಸ್ವಾಧೀನದಲ್ಲಿ ಇರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳ ತಂದಗೆಗೆ ಬಂದಿದ್ದ 1 ಎಕರೆ 80 ಸೆಂಟ್ಸ ಇದು ಪ್ರತಿವಾದಿಗಳ ಸ್ವಾಧೀನದಲ್ಲಿಯೇ ಇರುವುದು ಅಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನದಲ್ಲಿ ವಾದಿ ಮತ್ತು ಪ್ರತಿವಾದಿಯರು ಎಷ್ಟು ಎಷ್ಟು ವಿಸ್ತಿರ್ಣದಲ್ಲಿ ಸ್ವಾಧೀನದಲ್ಲಿ ಇರುವರು ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

27-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**